ESI.A.No.1/2020

AW-1,

ದಿನಾಂಕಃ 21-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. ABN ವಕೀಲರಿಂದ

ನಮ್ಮ ಸಂಸ್ಥೆ ಇ ಎಸ್ ಐ ಕಾಯಿದೆಯಡಿಯಲ್ಲಿ ಬರುತ್ತದೆ ಎಂದರೆ ಸರಿ . ನಮ್ಮ ಸಂಸ್ಥೆಯು ಜೂನ್ 2017 ರವರೆಗೆ ಇ ಎಸ್ ಐ ವಂತಿಗೆಯನ್ನು ಕಟ್ಟಿರುತ್ತದೆ ಎಂದರೆ ಸರಿ. ಜುಲೈ 2017 ರಿಂದ ಅಕ್ಟೋಬರ್ 2018 ರವರೆಗೆ ಇ ಎಸ್ ಐ ವಂತಿಗೆಯನ್ನು ನೀಡದೇ ಇದ್ದುದರಿಂದ ನೋಟೀಸನ್ನು ಕಾರ್ಪೊರೇಶನ್ನವರು ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸಿಗೆ ನಾನು ಉತ್ತರವನ್ನು ನೀಡುವುದಾಗಲೀ ಕಾರ್ಪೊರೇಶನ್ನಿನ ಮುಂದೆ ಹಾಜರಾಗುವುದಾಗಲೀ ಮಾಡಿರುವುದಿಲ್ಲ ಎಂದರೆ ಸರಿ.ನಮ್ಮ ಸಂಸ್ಥೆಯು ಮುಚ್ಚಿದ್ದ ಬಗ್ಗೆ ಕ್ಲೋಷರ್ ನೋಟೀಸ್ ಹಾಗೂ ನೌಕರರಿಗೆ ನೀಡಿದ ಸೆಟ್ಲಮೆಂಟ್ ದಾಖಲಾತಿಗಳನ್ನು ಕಾರ್ಪೊರೇಶನ್ ಮುಂದಾಗಲೀ, ಈ ನ್ಯಾಯಾಧೀಕರಣದ ಮುಂದಾಗಲೀ ನೀಡಿರುವುದಿಲ್ಲ ಎಂದರೆ ಸರಿ. ನೇವಿಯಿಂದ ನನಗೆ ಯಾವುದೇ ವರ್ಕ ಆರ್ಡರ್ ಬಂದಿರುವುದಿಲ್ಲ ಎಂದು ತೋರಿಸಲು ನಾನು ಈ ನ್ಯಾಯಾಧೀಕರಣದ ಮುಂದೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಪಿ ಎಫ್ ಇಲಾಖೆಗೆ ನನಗೆ ಕೆಲಸ ಇಲ್ಲದರ ಬಗ್ಗೆ ತಿಳಿಸಿರುತ್ತೇನೆ ಆದರೆ ಇ ಎಸ್ ಐ ಕಾರ್ಪೊರೇಶನ್ನಿಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಇ ಎಸ್ ಐ ಕಾರ್ಪೊರೇಶನ್ನಿಗೆ ಸದರಿ ವಿಚಾರವನ್ನು 2019 ರಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ನನಗೆ ಕೆಲಸ ಇದ್ದರೂ ಸಹ ಇ ಎಸ್ ಐ ವಂತಿಗೆ ಕಟ್ಟುವುದನ್ನು ತಪ್ಪಿಸಲು ಯಾವುದೇ ಕೆಲಸ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಎ-1 ಆದೇಶದಲ್ಲಿ ನಮೂದಿಸಿದ ಮೊತ್ತವನ್ನು ನಾನು ಇ ಎಸ್ ಐ ಕಾರ್ಪೊರೇಶನ್ನಿಗೆ ನೀಡಲು ಭಾದ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್.ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.